



ನೀಡುವುದಿಲ್ಲ. ಜೀಪ್‌ಗಳು ಮುನ್ನಾ ದಿನವೇ ರಾತ್ರಿ ಉಳಿದುಕೊಳ್ಳುವ ಪ್ರವಾಸಿಗರನ್ನು ಬಿಟ್ಟು, ಮಾರನೇ ದಿನ ನಿರ್ದಿಷ್ಟ ಅವಧಿಗೆ ವಾಪಸ್ಸು ಪ್ರಯಾಣಿಕರನ್ನು ಕರೆದೊಯ್ಯಲು ಬರುತ್ತವೆ. ರಾತ್ರಿ ಉಳಿದುಕೊಳ್ಳುವವರು ಮುಂಚಿತವಾಗಿ ತಿಳಿಸಿದರೆ ಸಸ್ಯಹಾರಿ ಊಟದ ವ್ಯವಸ್ಥೆಯನ್ನು ಇಲ್ಲೇ ಮಾಡಿಕೊಡುತ್ತಾರೆ. ಮಾಂಸಾಹಾರ ಅವಶ್ಯಕತೆಯಿದ್ದಲ್ಲಿ ಹೊರಡುವಾಗಲೇ ಪಾರ್ಸೆಲ್ ತೆಗೆದುಕೊಂಡು ಹೋಗಬಹುದಾಗಿದೆ. ಇಲ್ಲಿ ಹೆಚ್ಚಿನೆಲ್ಲಾ ಮೊಬೈಲ್‌ಗಳ ನೆಟ್‌ವರ್ಕ್‌ಗಳು ಅಲ್ಪಸ್ವಲ್ಪ ಸಿಗುವುದರಿಂದ ಸಂಪರ್ಕಕ್ಕೇನು ಅಷ್ಟೊಂದು ತೊಂದರೆಯಾಗಲಾರದು. ಇದು ಪ್ಲಾಸ್ಟಿಕ್ ನಿಷೇಧಿತ ಪ್ರದೇಶವಾದುದರಿಂದ ಪ್ರವಾಸಿಗರು ಪ್ಲಾಸ್ಟಿಕ್ ಅನ್ನು ಪರಿಸರಕ್ಕೆ ಹಾನಿಯಾಗದಂತೆ ವಿಲೇವಾರಿ ಮಾಡುವ ಮನೋಧರ್ಮದವರಾದರೆ ಒಳ್ಳೆಯದು.

ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳು ಚಾರಣಕ್ಕೆ ಸೂಕ್ತ ಕಾಲ. ಪ್ರವಾಸಿಗರು ಸ್ವತಃ ಚಾಲಕರನ್ನು ಸಂಪರ್ಕಿಸಿ ಪ್ರಯಾಣಕ್ಕೆ ಗೊತ್ತುಪಡಿಸಿದ್ದಲ್ಲಿ ಸರತಿಯ ಸಾಲಿನ ಅನುಮತಿ ರಹಿತವಾಗಿಯೂ ಜೀಪ್‌ಗಳು ಸಂಚರಿಸುತ್ತವೆ. ಇಲ್ಲಿ ಕೊಡಚಾದ್ರಿ ಜೀಪು ಚಾಲಕ ಮತ್ತು ಮಾಲಕರ ಸಂಘವೂ ಅಸ್ತಿತ್ವದಲ್ಲಿದೆ. ಬೆಳಿಗ್ಗೆ 6 ಗಂಟೆಯಿಂದ ಸಂಜೆ 6.30 ರವರೆಗೂ ಜೀಪ್ ಸೇವೆ ಲಭ್ಯ. ಸಂಜೆ 6.30 ಕ್ಕೆ ಅರಣ್ಯ ಇಲಾಖೆಯ ಗೇಟ್ ಮುಚ್ಚುವುದರಿಂದ ಪರ್ವತಕ್ಕೆ ಹೋಗಲು ಅಥವಾ ಅಲ್ಲಿಂದ ಬರಲು ಅವಕಾಶವಿಲ್ಲ.

ಕಡಿದಾದ, ಕೆಸರು ಧೂಳು, ಕಲ್ಲು ಕಂದಕಗಳಿಂದ ಕೂಡಿದ ರಸ್ತೆಗಳಲ್ಲಿ ಈ ಜೀಪ್‌ಗಳು ಚಲಿಸುವುದರಿಂದ ನಾಲ್ಕು ಹೊಸ ಚಕ್ರಗಳ ಆಯಸ್ಸು ಕೇವಲ ಆರು ತಿಂಗಳುಗಳು ಮಾತ್ರ ಎನ್ನುವಾಗ ಇಲ್ಲಿನ ರಸ್ತೆಗಳ ಸ್ವರೂಪ ಹೇಗಿರಬಹುದೆಂದು ಅಂದಾಜಿಸಬಹುದು ಮತ್ತು ಇಷ್ಟೇ ಅವಧಿಗೆ ಚಕ್ರದ ಬೇರಿಂಗ್‌ಗಳೂ ಸವೆದು ಹೋಗುತ್ತವೆ. ಜೀಪ್‌ಗಳು ಒಂದು ಬಾರಿ ಹೋಗಿ ಬರಲು ಸರಾಸರಿ ರೂ.600/– ಮೊತ್ತದ ಡೀಸೆಲ್ ಅವಶ್ಯಕತೆಯಿದ್ದು, ಬಹಳಷ್ಟು ಏರು ಮತ್ತು ಕಡಿದಾದ ರಸ್ತೆಯಲ್ಲೂ ಇಲ್ಲಿನ ಜೀಪ್‌ಗಳು ರೇಸ್‌ನ ಕಾರ್‌ಗಳಂತೆ ಬಹಳ ವೇಗವಾಗಿ ಒಂದರ ಹಿಂದೊಂದು ಧೂಳೆಬ್ಬಿಸುತ್ತಾ ಕೆಸರು ನೀರನ್ನು ರಾಚುತ್ತಾ ಸಂಚರಿಸುವುದರಿಂದ ಪ್ರವಾಸಿಗರಿಗೆ ಪ್ರಯಾಣದ ಜೊತೆಗೆ ರೋಮಾಂಚನಕಾರಿ ಅನುಭವವನ್ನು ನೀಡುತ್ತವೆ.

ಇಲ್ಲಿನ ರಸ್ತೆಯಲ್ಲಿ ವಾಹನ ಚಲಾಯಿಸುವುದರಲ್ಲೇ ತಮ್ಮ ಬದುಕನ್ನು ಕಟ್ಟಿಕೊಂಡಿರುವ ಅದೆಷ್ಟೋ ಜೀಪ್ ಚಾಲಕರು ಇಲ್ಲಿದ್ದಾರೆ. ಪ್ರವಾಸಿಗರ ಸಂಪರ್ಕ ಸೇತುವಾಗಿರುವ ಚಾಲಕರ ಸಾಹಸಮಯ ಬದುಕಿಗೆ ಹ್ಯಾಟ್ಸಾಫ್.